ಆರತಿ ಘಟಿಕಾರ್, ದುಬೈ
*ಕೆಲವರು ತಮ್ಮ ವೈಯಕ್ತಿಕ ಜಗಳಗಳನ್ನೂ ಫೇಸ್‌ಬುಕ್ ಮೇಲೆ ಪ್ರದರ್ಶಿಸುತ್ತಾರಲ್ಲ, ಏಕೆ ರಾಮ್?*



ಫೇಸ್‌ಬುಕ್‌ನಲ್ಲಿ ಎಷ್ಟೇ ಗುದ್ದಾಡಿದರೂ ಫೇಸ್ ಮುಕ್ಕಾಗುವುದಿಲ್ಲ ಎಂಬ ಧೈರ್ಯ.

ರತ್ನಜ, ಮೈಸೂರು
*ಸುಖವನ್ನು ಬೆನ್ನಟ್ಟಿ ಹೋದಂತೆಲ್ಲ ಸುಖ ದೂರವಾಗುತ್ತಲ್ಲ, ಏಕೆ ರಾಂಜಿ?*
ಸುಖ ನಾಯಿಯ ಬಾಲದಂತೆ. ಹಿಂದೆಯೇ ಇರುತ್ತದೆ. ಕಚ್ಚಿ ಹಿಡಿಯಲು ಯತ್ನಿಸಿದರೆ ಮಾತ್ರ ಎಟುಕದಷ್ಟೆ.

ಮಹಾವೀರ ಕಾಸರ, ಶಿವಮೊಗ್ಗ
*ನಗು ಆರೋಗ್ಯಕ್ಕೆ ಒಳ್ಳೆಯದು. ಅಳು?*
ಸೀರಿಯಲ್ ನಿರ್ಮಾಪಕರ ಆರೋಗ್ಯಕ್ಕೆ ಒಳ್ಳೆಯದು. ಅಳುವ ಕಡಲೊಳು ತೇಲಿಬರುವುದು ಸೀರಿಯಲ್‌ನ ದೋಣಿ.

ಕುಮಾರ ಚಲವಾದಿ, ಹಾಸನ
*ಬೆಳಗ್ಗೆ ಎದ್ದು ಕತ್ತೆಯ ಮುಖ ನೋಡಿದರೆ ಒಳಿತಾಗುವುದಂತೆ. ಆದರೆ ಕತ್ತೆಗಳನ್ನು ಎಲ್ಲಿ ಹುಡುಕಲಿ?*



ಎಂತಹ ವಿಚಿತ್ರ! ನಿಮ್ಮ ಶ್ರೀಮತಿಯವರಿಗೆ ಈ ಸಮಸ್ಯೆಯೇ ಇಲ್ಲವಂತೆ!

ಎನ್. ಗೋಪಾಲರಾವ್, ಬೆಂಗಳೂರು
*ನಾದಿನಿಯೊಬ್ಬಳು ಮನೆಯೊಳಗಿದ್ದರೆ ಮನೆ ನಂದನವಾಗುವುದಂತೆ. ಪತಿಯ ನಾದಿನಿಯೋ, ಸತಿಯ ನಾದಿನಿಯೋ?*
ಭಾವನಲ್ಲಿ ಭಾವನೆಗಳನ್ನು, ಅಕ್ಕನಲ್ಲಿ ಅಕ್ಕರೆಯನ್ನು ಮೂಡಿಸುವ ಪತಿಯ ನಾದಿನಿಯೇ.

ಎಸ್.ಎನ್. ಮಹಾಬಲರಾವ್, ಎನ್ನಾರ್ ಪುರ
*ದೈಹಿಕವಾಗಿ ಬೆಳೆದಿರುವವಳು ಮಾನಸಿಕವಾಗಿ ಬೆಳೆದಿಲ್ಲವಲ್ಲ...?*
ಪ್ರಬುದ್ಧತೆ ತೋರಿಸಿಕೊಂಡರೆ ಬುದ್ದೂಗಳು ಲಗ್ನವಾಗುವುದಿಲ್ಲ ಎಂಬ ಮುನ್ನೆಚ್ಚರಿಕೆ.

ಫಾಲನೇತ್ರ ಸಜ್ಜನ, ಶಿರಸಿ
*ಬಸವ ತತ್ವಕ್ಕೂ, ಬಸವಳಿದವರ ತತ್ವಕ್ಕೂ ವ್ಯತ್ಯಾಸವೇನು?*
ಇವರದು 'ಅನ್ಯರಿಗೆ ಅಸಹ್ಯ ಪಡಬೇಡ'; ಅವರದು 'ಗಣ್ಯರಿಗೆ ಅಸಹ್ಯ ಪಡಬೇಡ'.

ಕೆ.ಪಿ. ರಾಮಗುಂಡಿ, ಬೈಲಹೊಂಗಲ
*ಪ್ರಪಂಚದಲ್ಲಿ ಅತಿ ಅಗ್ಗವಾದ ವಸ್ತು ಯಾವುದು ಸಾರ್?*
ಚಿಲ್ರೆ ಮನುಷ್ಯ.

ಎಂ.ಎಸ್. ಧರ್ಮೇಂದ್ರ, ದೊಡ್ಡಮಗ್ಗೆ
*ವೈದ್ಯರು ಆಗಾಗ್ಗೆ ಮುಷ್ಕರ ನಡೆಸುವುದು ಒಂದು ಕಾಯಿಲೆಯೇ?*
ಅಲ್ಲ; ರೋಗಿಗಳಿಗೆ ನರಳಾಟದಿಂದ ಅಲ್ಪ ವಿರಾಮ.

ನರಸಿಂಹ ಪೈ, ಹೊನ್ನಾವರ
*ಸುಖ ದುಃಖಗಳು ಯಾಕೆ ಜೊತೆ ಜೊತೆಯಾಗಿಯೇ ಬರುತ್ತವೆ?*
ನೀವೇ ಇನ್ವಿಟೇಷನ್‌ನಲ್ಲಿ ಶ್ರೀ/ಶ್ರೀಮತಿ ಬರಬೇಕು ಎಂದು ಬರೆದಿರುತ್ತೀರಲ್ಲ!

ಮುರಲೀಧರ ಕುಲಕರ್ಣಿ, ಬೀದರ್
*ಇಂದಿನ ಕಾಲದಲ್ಲಿ ಜನರು ಕೈಗಡಿಯಾರವನ್ನು ಏಕೆ ಧರಿಸುತ್ತಿಲ್ಲ?*
ಸರಿಯಿಲ್ಲ ಅದು. ಹಣ ಕೊಟ್ಟು ಕೊಂಡವನಿಗೇ 'ನೀನು ಲೇಟು' ಎಂದು ಸೂಚಿಸುವ ಅಹಂಕಾರಿ.

ಅಮರಯ್ಯ ಪತ್ರಿಮಠ, ಸುರಪುರ
*ಕೆಲವೊಮ್ಮೆ ಮುಖವಾಡ ಧರಿಸಿ ಬಾಳಬೇಕಾಗುತ್ತದಲ್ಲಾ....?*
ಛೆ! ಅಂತಹ ಮುಖ ಮರೆಸಿಕೊಳ್ಳುವಂತಹ ಕೆಲಸ ಮಾಡಬಾರದು ಸಾರ್.

ಜಾಕಬ್ ಡಿಸೋಜ, ಕುರುವಳ್ಳಿ
*ರಾಜಕೀಯದಲ್ಲಿ 'ಜಾಣಮೌನ' ಎಂದರೇನು?*
ಎಲ್ಲವನ್ನೂ ಮಗನ ಬಾಯಲ್ಲಿ ಆಡಿಸುವ ದೊಡ್ಡಗೌಡರ ಪ್ರಿಯವಾದ ಆಟ.

## ಬಹುಮಾನಿತ ಪ್ರಶ್ನೆ

ಎಂ.ಜಿ. ನೇಹವರ್ಷಿಣಿ, ಬಳ್ಳಾರಿ
*ಸತ್ಯಕ್ಕೆ ಮತ್ತು ಸುಳ್ಳಿಗೆ ಎಷ್ಟು ಬೆಲೆ?*
ಇಷ್ಟೇ ಎಂದು ಹೇಳಲಾಗದು. ಒಬ್ಬೊಬ್ಬ ವಕೀಲನದು ಒಂದೊಂದು ಫೀಸ್.

ಸುಮಾ ರಮೇಶ್, ಹಾಸನ
*ಇಂದು ಮಕ್ಕಳ ಮುಗ್ಧತೆಯನ್ನು ಕಾಪಾಡುವ ತಂತ್ರಜ್ಞಾನದ ಅಗತ್ಯವಿದೆ ಅಲ್ಲವೆ?*
ತಂತ್ರಜ್ಞಾನವಲ್ಲ, ಜೊತೆಗಾರರ ಅಗತ್ಯವಿದೆ. ಒಂಟಿ ಮಗುವಿಗೆ ಮೊಬೈಲ್ ಸಾಥಿಯಾದರೆ ಮುಗ್ಧತೆ ಉಡೀಸ್.

ಎಂ.ಬಿ. ರಂಗಪ್ಪ ಶೆಟ್ಟಿ, ಮೋಕಾ
*ಹುಚ್ಚುಮುಂಡೆ ಮದುವೇಲಿ ಉಂಡೋನ್ವೇ ಜಾಣ ಎಂಬ ಮಾತು ನಮ್ಮ ಮಂತ್ರಿಗಳಿಗೆ ಎಷ್ಟು ಪ್ರಸ್ತುತ ಸಾರ್?*
ಸಮ್ಮಿಶ್ರದಲ್ಲಿ ಸಂಪೂರ್ಣ ಪ್ರಸ್ತುತ. ಕಮಲಮ್ಮನ ಶ್ರಾದ್ಧದ ಲಾಡುವನ್ನು ತೆನೆಯಮ್ಮ ಸವಿದದ್ದೂ ಸವಿದದ್ದೇ.

ಎಂ. ಮೃತ್ಯುಂಜಯ, ಚಿತ್ರದುರ್ಗ
*ಮಳೆ ಬಾರದಿದ್ದಾಗ ಕತ್ತೆಗಳ, ಕಪ್ಪೆಗಳ ಮದುವೆ ಮಾಡಿಸುತ್ತಾರೆ. ಮಳೆ ಅತಿಯಾದಾಗ ಯಾರ ಮದುವೆ ಮಾಡಿಸಬೇಕು?*



ಮದುವೆ ಮಾಡಿಸಬಾರದಂತೆ; ಮಾಡಿಸಿದ ಮದುವೆಗಳ ವಿಚ್ಛೇದನ ಮಾಡಿದರೆ ಮಳೆ ನಿಲ್ಲುವುದಂತೆ.

ಎಂ.ಎ. ಕುಮಾರ್, ಬೆಂಗಳೂರು
*ಹೆಣ್ಣು ಜಾರುವುದಕ್ಕೆ ಕಾರಣ ಯಾರು?*
ಸಾಮಾನ್ಯವಾಗಿ, ಸ್ಟಿಲೆಟೋ ಹೀಲ್ಸ್.

ಚೆನ್ನವೀರ ನಾಲ್ವಾಡ, ಚಿಕ್ಕೇನಕೊಪ್ಪ
*ಚುನಾವಣೆಯಲ್ಲಿ ಚುನಾಯಿತರಾಗಲು ಏನು ಮಾಡಬೇಕು?*
ಛೆ! ಅಂತಹ ಅಸಹ್ಯವಾದ ವಿವರಗಳನ್ನು ಈ ಅಂಕಣದಲ್ಲಿ ಪ್ರಕಟಿಸುವುದಿಲ್ಲ.

■ ರಾಮ್